## ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.

**ಉಪಸ್ಥಿತರುಃ- ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ**
**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ಯಾದಗಿರಿ,**

**ಸಿ.ಸಿ. ನಂಃ 532/2021**

**ಫಿರ್ಯಾಧಿದಾರಃ ಕರ್ನಾಟಕ ಸರ್ಕಾರದ ಪರವಾಗಿ ಸೈದಾಪೂರ ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿತರು ಃ ಮೋಹನ ಮತ್ತು ಇತರರು.**

**ದೋಷಾರೋಪಣೆ**

ನಾನು, ಶ್ರೀ ರಾಹುಲ ಚಾಂಭಾರ ಬಿ.ಎ.ಎಲ್.ಎಲ್.ಬಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಯಾದಗಿರಿ, ಈ ಕೆಳಕಂಡ ಆರೋಪಿತರು.

| | |
|---|---|
| 1. | ಕಾಶಪ್ಪ ತಂದೆಃ ಶಿಮ್ಮಣ್ಣ ಭಜಂತ್ರಿ, ವಃ 35 ವರ್ಷ, ಉಃ ಬ್ಯಾಂಡ್ ಬಾರಿಸುವುದು, ಸಾಃ ಬಾಡಿಯಾಳ ಗ್ರಾಮ ತಾಃ ಜಿಃ ಯಾದಗಿರಿ |
| 2. | ತಿಮ್ಮಣ್ಣ ತಂದೆಃ ಮಹಾದೇವಪ್ಪ ಭಜಂತ್ರಿ, ವಃ 19 ವರ್ಷ, ಉಃ ಬ್ಯಾಂಡ್ ಬಾರಿಸುವುದು, ಸಾಃ ಬಾಡಿಯಾಳ ಗ್ರಾಮ ತಾಃ ಜಿಃ ಯಾದಗಿರಿ |
| 3. | ಮಹಾದೇವಪ್ಪ ತಂದೆಃ ತಿಮ್ಮಣ್ಣ ಭಜಂತ್ರಿ, ವಃ 42 ವರ್ಷ, ಉಃ ಬ್ಯಾಂಡ್ ಬಾರಿಸುವುದು, ಸಾಃ ಬಾಡಿಯಾಳ ಗ್ರಾಮ ತಾಃ ಜಿಃ ಯಾದಗಿರಿ |
| 4. | ಚಂದ್ರು ತಂದೆಃ ಶಿವಪ್ಪ ಭಜಂತ್ರಿ, ವಃ 25 ವರ್ಷ, ಉಃ ಬ್ಯಾಂಡ್ ಬಾರಿಸುವುದು, ಸಾಃ ಬಾಡಿಯಾಳ ಗ್ರಾಮ ತಾಃ ಜಿಃ ಯಾದಗಿರಿ |
| 5. | ಬಸವರಾಜ ತಂದೆಃ ಮರೆಪ್ಪ ಭಜಂತ್ರಿ, ವಃ 27 ವರ್ಷ, ಉಃ ಬ್ಯಾಂಡ್ ಬಾರಿಸುವುದು, ಸಾಃ ಭಾರಪೇಠ ಚಿತ್ತಾಪೂರ. |
| 6. | ಕಾಶಪ್ಪ ತಂದೆಃ ಬುಗ್ಗಪ್ಪ ಭಜಂತ್ರಿ, ವಃ 22 ವರ್ಷ, ಉಃ ಬ್ಯಾಂಡ್ ಬಾರಿಸುವುದು, ಸಾಃ ಅರಿಕೇರಾ (ಕೆ) ಗ್ರಾಮ |
| 7. | ಹಣಮಂತ ತಂದೆಃ ಚಂದಪ್ಪ ಭಜಂತ್ರಿ, ವಃ 35 ವರ್ಷ, ಉಃ ಬ್ಯಾಂಡ್ ಬಾರಿಸುವುದು, ಸಾಃ ಜಾಕನಳ್ಳಿ |
| 8. | ಶರಣಪ್ಪ ತಂದೆಃ ತಿಮ್ಮಣ್ಣ ಭಜಂತ್ರಿ, ವಃ 30 ವರ್ಷ, ಉಃ ಬ್ಯಾಂಡ್ ಬಾರಿಸುವುದು, ಸಾಃ ಬಾಡಿಯಾಳ ಗ್ರಾಮ ತಾಃ ಜಿಃ ಯಾದಗಿರಿ |
| 9. | ರಾಮಚಂದ್ರ ತಂದೆಃ ತಿಮ್ಮಣ್ಣ ಭಜಂತ್ರಿ, ವಃ 28 ವರ್ಷ, ಉಃ ಬ್ಯಾಂಡ್ ಬಾರಿಸುವುದು, ಸಾಃ ಬಾಡಿಯಾಳ ಗ್ರಾಮ ತಾಃ ಜಿಃ ಯಾದಗಿರಿ |

| | |
|---|---|
| 10. | ಬಸಮ್ಮ ಗಂಡಃ ಕಾಶಪ್ಪ ಭಜಂತ್ರಿ, ವಃ 28 ವರ್ಷ, ಉಃ ಮನೆಕೆಲಸ,<br>ಸಾಃ ಬಾಡಿಯಾಳ ಗ್ರಾಮ ತಾಃ ಜಿಃ ಯಾದಗಿರಿ |
| 11. | ಕಮಲಮ್ಮ ಗಂಡಃ ಮಹಾದೇವಪ್ಪ ಭಜಂತ್ರಿ, ವಃ 35 ವರ್ಷ, ಉಃ ಮನೆ ಕೆಲಸ<br>ಸಾಃ ಬಾಡಿಯಾಳ ಗ್ರಾಮ ತಾಃ ಜಿಃ ಯಾದಗಿರಿ |

**ಆದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಎನೆಂದರೆ,**

ಮೊದಲನೆಯದಾಗಿ ಸೈದಾಪೂರ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಬಾಡಿಯಾಳ ಗ್ರಾಮದ ಬಳಿ ದಿನಾಂಕಃ 01-06-2021 ರಂದು ಬೆಃ 7-30 ಗಂಟೆ ಸುಮಾರಿಗೆ ಆರೋಪಿತರಾದ ನಿವೆಲ್ಲರೂ ಅಕ್ರಮಕೂಟ ಸೇರಿಕೊಂಡು ಹಕಾರಿ ಹೊಡೆಯುತ್ತಾ ಆರೋಪಿಗಳಾದ ನೀವೆಲ್ಲರೂ ಮಾರಕಾಯುಧವಾದ ಕಲ್ಲು, ಬಡಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಆರೋಪಿಗಳಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟದ ಸದಸ್ಯರಾಗಿದ್ದುಕೊಂಡು ದೊಂಬಿ ನಡೆಸುವ ಮೂಲಕ ಆರೋಪಿಗಳಾದ ನೀವೆಲ್ಲರೂ ಭಾ.ದಂ.ಸಂ. 143, 147, 148, ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

2. ಎರಡನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಗಳಾದ ನೀವೆಲ್ಲರೂ ಏಕೊದ್ದೇಶದಿಂದ ಅಕ್ರಮಕೂಟ ಸೇರಿಕೊಂಡು ದೊಂಬಿ ನಡೆಸುತ್ತಾ ಆರೋಪಿಗಳಾದ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಮಾರಕಾಯುಧವಾದ ಬಡಿಗೆಯಿಂದ ಚಾಸಾಃ 6 ರವರಿಗೆ ತಲೆಗೆ ಹೊಡೆದು ರಕ್ತಗಾಯ ಮಾಡಿರುವುದಲ್ಲದೆ ನಿಮ್ಮ ಪೈಕಿ 2 ನೇ ಆರೋಪಿಯಾದ ನೀನು ಬಡಿಗೆಯಿಂದ ಚಾಸಾಃ 1 ರವರ ಟೊಂಕಕ್ಕೆ ಹೊಡೆದು ಗುಪ್ತಗಾಯ ಮಾಡಿರುವುದಲ್ಲದೆ, ಮತ್ತು ನಿಮ್ಮ ಪೈಕಿ 3 ನೇ ಆರೋಪಿಯಾದ ನೀನು ಬಡಿಗೆಯಿಂದ ಚಾಸಾಃ 7 ರವರಿಗೆ ಬಾಯಿಗೆ ಹೊಡೆದು, ತುಟಿಗೆ ರಕ್ತಗಾಯ ಮಾಡಿದ್ದಲ್ಲದೆ, ಜೊತೆಗೆ ಚಾಸಾಃ 1 ರವರ ಬಲಗೈ ಮೊಳಕೈಗೆ ಹೊಡೆದು ರಕ್ತಗಾಯ ಮಾಡಿದ್ದಲ್ಲದೆ, ಚಾಸಾಃ 10 ರವರ ಬಲಗೈಗೆ ಹೊಡೆದು ಗಾಯ ಉಂಟು ಮಾಡಿದ್ದಲ್ಲದೆ, ಚಾಸಾಃ 4 ರವರಿಗೆ ಕಟ್ಟಿಗೆಯಿಂದ ಚಾಸಾಃ 8 ರವರಿಗೆ ಟೊಂಕಕ್ಕೆ ಹೊಡೆದು ಒಳಪೆಟ್ಟು ಮಾಡಿದ್ದಲ್ಲದೆ ನಿಮ್ಮ ಪೈಕಿ 8 ನೇ ಆರೋಪಿಯಾದ ನೀನು ಚಾಸಾಃ 4 ರವರಿಗೆ ಬಡಿಗೆಯಿಂದ ಟೊಂಕಕ್ಕೆ ಹೊಡೆದು ಒಳಪೆಟ್ಟು ಮಾಡಿದ್ದಲ್ಲದೆ, ನಿಮ್ಮ ಪೈಕಿ 8 ನೇ ಆರೋಪಿಯಾದ ನೀನು ಕಲ್ಲಿನಿಂದ ಚಾಸಾಃ 1 ರವರಿಗೆ ಬಲಗಾಲಿಗೆ ಹೊಡೆದು ತರಚಿದ ಗಾಯ

ಮಾಡುವ ಮೂಲಕ ಆರೋಪಿಗಳಾದ ನೀವೆಲ್ಲರೂ ಭಾ.ದಂ.ಸಂ. 324 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ

3. ಮೂರನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಗಳಾದ ನೀವೆಲ್ಲರೂ ಏಕೊದ್ದೇಶದಿಂದ ಅಕ್ರಮಕೂಟ ಸೇರಿಕೊಂಡು ದೊಂಬಿ ನಡೆಸುತ್ತಾ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಚಾಸಾಃ 10 ರವರ ಬಲ ಕಿವಿಗೆ ಕೈಯಿಂದ ಹೊಡೆದು ಗಾಯ ಮಾಡಿದ್ದಲ್ಲದೆ, ನಿಮ್ಮ ಪೈಕಿ 5 ನೇ ಆರೋಪಿಯಾದ ನೀನು ಚಾಸಾಃ 8 ರವರ ಹೊಟ್ಟೆಯ ಮೇಲೆ ಕುಳಿತು ಕೈ ಮುಷ್ಟಿ ಮಾಡಿ ಎದೆಗೆ ಗುದ್ದಿರುತ್ತೀರಿ. ನಿಮ್ಮ ಪೈಕಿ 7 ನೇ ಆರೋಪಿಯಾದ ನೀನು ಚಾಸಾಃ 8 ರವರಿಗೆ ಕೈಯಿಂದ ಹೊಡೆದುದಲ್ಲದೆ, ನಿಮ್ಮ ಪೈಕಿ 10 ನೇ ಆರೋಪಿಯಾದ ನೀನು ಕೈಯಿಂದ ಚಾಸಾಃ 10 ರವರಿಗೆ ಬೆನ್ನಿಗೆ ಮುಷ್ಟಿ ಮಾಡಿ ಹೊಡೆದಿರುತ್ತೀರಾಆ ಮೂಲಕ ಆರೋಪಿಗಳಾದ ನೀವೆಲ್ಲರೂ ಭಾ.ದಂ.ಸಂ. 323 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

4. ನಾಲ್ಕನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಗಳಾದ ನೀವೆಲ್ಲರೂ ಏಕೊದ್ದೇಶದಿಂದ ಅಕ್ರಮಕೂಟ ಸೇರಿಕೊಂಡು ದೊಂಬಿ ನಡೆಸುತ್ತಾ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಸೂಳೇ ಮಕ್ಕಳೆ ಎಂದು ಅವಾಚ್ಯ ಶಬ್ದದಿಂದ ಬೈದು ನಿಮ್ಮ ಪೈಕಿ 3 ನೇ ಆರೋಪಿಯಾದ ನೀನು ಚಾಸಾಃ 5 ರವರಿಗೆ ಸೂಳೇ ಎಂದು ಅವಾಚ್ಯ ಶಬ್ದದಲ್ಲಿ ಬೈದು ಈ ಮೂಲಕ ನೀನು ಭಾ.ದಂ.ಸಂ. 504 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

5. ಐದನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಗಳಾದ ನೀವೆಲ್ಲರೂ ಏಕೊದ್ದೇಶದಿಂದ ಅಕ್ರಮಕೂಟ ಸೇರಿಕೊಂಡು ದೊಂಬಿ ನಡೆಸುತ್ತಾ ನಿಮ್ಮ ಪೈಕಿ 1 ನೇ ಆರೋಪಿಯಾದ ನೀನು ಚಾಸಾಃ 5 ರವರ ಮಾನಭಂಗ ಮಾಡುವ ಉದ್ದೇಶದಿಂದ ಅವರ ಕಪಾಳಕ್ಕೆ ಹೊಡೆದು, ಕುಪ್ಪಸ ಹಿಡಿದು ಜಗ್ಗಾಡಿ ಅವಮಾನ ಮಾಡಿರುವುದಲ್ಲದೆ, ನಿಮ್ಮ ಪೈಕಿ 9 ನೇ ಆರೋಪಿತನಾದ ನೀನು ಚಾಸಾಃ 9 ರವರ ಸೀರೆಯನ್ನು ಕೈಯಿಂದ ಹಿಡಿದು ಎಳೆದು ಜಗ್ಗಿ

ಅಪಮಾನ ಮಾಡುವ ಮೂಲಕ ನೀನು ಭಾ.ದಂ.ಸಂ. 354 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

6. ಕೊನೆಯದಾಗಿ ಈ ಮೇಲೆ ಹೇಳಿದ ದಿನ, ದಿನಾಂಕ, ಸ್ಥಳ, ಸಮಯ ಹಾಗೂ ಸಂದರ್ಭದಂದು ಆರೋಪಿಗಳಾದ ನೀವೆಲ್ಲರೂ ಏಕೋದ್ದೇಶದಿಂದ ಅಕ್ರಮಕೂಟ ಸೇರಿಕೊಂಡು ದೊಂಬಿ ನಡೆಸುತ್ತಾ ಆರೋಪಿಗಳಾದ ನಿಮ್ಮ ಪೈಕಿ 3 ನೇ ಆರೋಪಿತನಾದ ನೀನು ಚಾಸಾಃ 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಮಾಡುವುದರ ಮೂಲಕ  ಆರೋಪಿಗಳಾದ ನೀವೆಲ್ಲರೂ ಭಾ. ದಂ. ಸ. 506 ಸಹವಾಚಕ ಕಲಂ 149 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

(ಈ ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಅವರು ನೀಡಿದ ವಿವರಣೆಯನ್ನು ಯತಾಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ).

**(ಶ್ರೀ ರಾಹುಲ ಚಾಂಭಾರ )**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ .ದಂ. ಗಳು ಯಾದಗಿರಿ.**

**ದಿನಾಂಕಃ  25-01-2023**
**ಸ್ಥಳಃ ಯಾದಗಿರಿ**